

ಬರುತ್ತಿದ್ದ ಹೆಂಡ್ತಿ ಕಡೆಗೆ ಕಿಟ್ಟಪ್ಪ ಒಮ್ಮೆ ನೋಡಿ 'ಬಿರಿಬಿರನೆ ಬಾ' ಎಂದು ಕೂಗುತ್ತಾ, 'ಇವಳದ್ದು ಹೊಸೂರು, ಇಲ್ಲೇ ಜಯಪುರದ ಪಕ್ಕ' ಎಂದು ಪರಿಚಯಿಸುತ್ತಲೇ ತೊನೆದಾಡುವ ಆ ಹಸಿರ ಹೊಲದಲ್ಲಿ ನಡೆದು ಹೋದರು.

ಹೆಗಲ ಮೇಲೆ ಕುಳಿತ ಮಗನ ಕಾಲುಗಳನ್ನು ಮೆಲ್ಲಗೆ ಜೋಡಿಸಿ ಕೊರಳಿಗೆ ಹಾರದಂತೆ ಧರಿಸಿಕೊಂಡು ಮುಂದೆ ಹೆಜ್ಜೆ ಇಡುತ್ತಾ 'ಈ ಮಗ ಬುದ್ಧಿ ಬೆಳೆಯೋ ತನಕ ಹಿರಿಯವಳು ಬದುಕಿರಬೇಕಿತ್ತು' ಎಂದು ಮೊದಲ ಹೆಂಡತಿ ಮಂಗಳನ ನೆನಪು ಮಾಡಿಕೊಂಡು ದುಃಖಿತನಾದ ಕಿಟ್ಟಪ್ಪ.

ಕಿಟ್ಟಪ್ಪನಿಗೆ ಯಾಕೋ ತನ್ನ ಮೇಲೆಯೇ ಬೇಜಾರಾಯಿತು. 'ಆವತ್ತು ನಾನು ರಾಗಿ ಮಿಲ್ ಮಾಡಿಸಲು ಹೋಗದಿದ್ದರೆ ಹೆಂಡತಿ ಮಂಗಳ ಉಳಿಯುತ್ತಿದ್ದಳು. ಹೋದವನು ಹೋದೆ ಸರಿ, ನಾನು ಬೆಲ್ಲ ತಿನ್ನುತ್ತಾ ಪಕ್ಕದೂರಿನಲ್ಲಿ ತಡ ಮಾಡಿದೆ. ಬೇಗ ಬಂದಿದ್ದರೆ ಹೆಂಡತಿ ಸಾಯುತ್ತಿರಲಿಲ್ಲ' ಎಂದು ತನ್ನ ತಪ್ಪೆಲ್ಲಾ ನೆನಪಾಗಿ ದುಃಖ ಒತ್ತರಿಸಿ ಒತ್ತರಿಸಿ ಗಂಟಲು ಕಟ್ಟಿಕೊಂಡು ಕಣ್ಣಲ್ಲಿ ನೀರು ಬಂತು.

'ಅವಳು ಸತ್ತಾಗ ಯಾರೂ ನನ್ನ ಕೈ ಹಿಡಿಯಲಿಲ್ಲ. ಬಲಕ್ಕೆ ನಿಲ್ಲಲಿಲ್ಲ. ನನ್ನಪ್ಪ, ಚಿಕ್ಕತಾಯಿ, ಅಣ್ಣತಮ್ಮದಿರು ಎಲ್ಲಾ ಇದ್ದು ಒಬ್ಬಂಟಿಯಾಗಿದ್ದೆ. ಇಷ್ಟೇನಾ ಪ್ರಪಂಚ? ಎಲ್ಲಾ ಕೈಲಿದ್ರೇನೆ. ಯಾರ್ ಬಿಟ್ರೂ ಆ ದೇವ್ರು ಕೈ ಬಿಡಲಿಲ್ಲ' ಎಂದು ನೆನೆಯುತ್ತ ಹೆಗಲ ಮೇಲೆ ಕುಳಿತ ಮಗನ ಸೊಂಟಕ್ಕೆ ಕೈ ಹಾಕಿದ. ಚಿಳಚಿಳನೆ ಹರಿದು ಬಂದ ಕಣ್ಣೀರು, ಹಿಂದೆ ಬರುತ್ತಿರುವ ಹೆಂಡತಿಗೂ ತಿಳಿಯದ ಹಾಗೆ ಕಣ್ಣುಗಳನ್ನು ತೀಡಿ, 'ಅಲ್ಲಾ, ಆವತ್ತು ಹೆಣ ಎತ್ತಕ್ಕಾದ್ರೂ ಯಾರಾದ್ರೂ ಬಂದ್ರ? ನಿಂಗತಾತನ ಹೆಂಡತಿ ಒಬ್ಬಳು ಬರಲಿಲ್ಲ ಅಂದಿದ್ರೆ ಹೆಣಕ್ಕೆ ನೀರು ಹುಯ್ಯುವವರೂ ಕೂಡ ಗತಿ ಇರುತ್ತಿರಲಿಲ್ಲ. ಅಂಥಾ ನಿರ್ಗತಿ ಭೂಮಿಯ ಮೇಲಿನ ಯಾವ ನರಮನುಷ್ಯನಿಗೂ ಬಾರದಿಲರಪ್ಪ' ಎಂದು ಕಣ್ಣು ಒರೆಸಿಕೊಳ್ಳುತ್ತಲೇ ಕಾಣದ ದೇವರ ಮತ್ತೆ ನೆನೆದ. ಹಿಂದೆ ಬರುತ್ತಿದ್ದ ಹೆಂಡತಿ ಕಡೆಗೊಮ್ಮೆ ನೋಡಿ ನಿಟ್ಟುಸಿರು ಬಿಟ್ಟ. ಹೆಣ ಹೊತ್ತು ಬರುವಾಗ ತನ್ನ ಹೆಗಲು ಭಾರವಾಗಿ ಆ ಹಾಸು ಬಂಡೆಯ ಮೇಲೆ ಕ್ಷಣ ಹೊತ್ತು ಹೆಣ ಮಲಗಿಸಿ ಹೆಗಲು ಬದಲಿಸಿಕೊಂಡಿದ್ದ. ಆಗ ಮಳೆ ಹನಿ ಹಾಕಿ ಗಾಬರಿಗೊಳಿಸಿತ್ತು. ಹೆಣ ಹೊತ್ತು ಒಂದೇ ಉಸಿರಿಗೆ ಹೊಲಮಾಳ ಸೇರಿದ್ದನ್ನು ನೆನೆದು ಬೆಚ್ಚಿದ್ದ.

ಸಂಸ್ಕಾರಕ್ಕೆಂದು ಹೊಲ ತಲುಪಿದಾಗ ಯಾರೋ ಊರಲ್ಲಿ 'ಬಿಮ್ಮನ್ಸಿ ಕಂಡ್ಲ, ಮಣ್ ಮಾಡಂಗಿಲ್ಲ' ಎಂದಿದ್ದ ಕೇಳಿ ಮಣ್ ಮಾಡಲು ಗುಂಡಿ ಸಹ ತೆಗೆದಿರಲಿಲ್ಲ. ಈ ನಿಂಗ ತಾತನ ಹೆಂಡತಿ ಮಲ್ಲಜ್ಜಿ ಹೆಣಕ್ಕೆ ಹೆಂಗೆ ಸಂಸ್ಕಾರ ಮಾಡಬೇಕು ಅನ್ನೋದೆಲ್ಲ ತೋರಿಸಿದಳು. ಆಗ ಈ ಕೂಸು ಎರಡು ವರ್ಷದ್ದು. ಇನ್ನೂ ಎದೆ ಕಚ್ಕೊಂಡೇ ಇರ್ತಿತ್ತು. ಇದನ್ನ ಕೂಡ ಯಾರೂ ಎತ್ಕೊಣವ್ರೇ ಇರಲಿಲ್ಲ. ಈ ಮಲ್ಲಜ್ಜಿ ಪಾಪ ತಾನು ನಡೆಯೋದೇ ಕಷ್ಟ ಅಂತದ್ರಲ್ಲಿ ಇದನ್ನೂ ಇರಿಕ್ಕಂಡು ಬಂದಿತ್ತು.

ಊರಲ್ಲಿ ಅಂಗೊಬ್ರು ಇಂಗೊಬ್ರು ಬಂದು ಹೆಣ ನೋಡ್ಕಂಡೋದ್ರೇ ವಿನಃ ಅವರವರದೇ ಕಥೆ ಕಲ್ಪನೆ ಮಾಡ್ಕೊಂಡು 'ಅಂಗಾಯ್ತಂತೆ, ಇಂಗೆ ಸಾಯ್ತಂತೆ' ಎಂದು ಗುಸು ಗುಸು. ಹೀಗೆ ಊರು ನೂರಾರು ಹಣ್ಣು ತಿಂದು ಎಸೆದ ಸಿಪ್ಪೆ ಊರ ತಿಪ್ಪೆ ಗೊಬ್ಬರವಾಗಿತ್ತು. ಆಗಲೂ ಈ ಹಾಳಾದ ನಮ್ಮಪ್ಪ ಹೆಣ ನೋಡಕ್ಕೂ ಬರಲಿಲ್ಲ. ಅಂಥಾ ತಪ್ಪೇನು ಮಾಡಿದ್ದೆ? ಅವ್ವ ಸತ್ತಾಗ ಅಪ್ಪ ಬೇರೆ ಮದುವೆಯಾಗೋಕೆ ನಾನೇನೂ ಅಡ್ಡ ಬರಲಿಲ್ಲ. ಎರಡನೇ ಸಂಬಂಧಕ್ಕೆ ಮಕ್ಕಳಾದ ಮೇಲೆ ಮಗ ಅನ್ನೋದನ್ನೂ ನೋಡದೆ ಬೀದಿಲಿ ಇಟ್ಬಾಡಿಸಿದ್ರು. ಇದ್ದೊಬ್ಬ ತಂಗೀನ ಚಿಕ್ಕವ್ವನ ತಮ್ಮನಿಗೇ ಮದುವೆ ಮಾಡ್ಕಂಡುಒಳಿಕೆ ತಕಂಡ್ರು. ನನಗೆ ದಿಕ್ಕಿಲ್ಲದಂಗೆ ಮಾಡಿದ್ರು.